3. ಭೂ ಪರಿವರ್ತನೆ ಇಲ್ಲದೆ ಸಾಗುವಳಿ ಜನೀನನ್ನು ಇತರೇ ಉದ್ದೇಶಗಳಿಗಾಗಿ ಬಳಸಿಕೊಂಡಿರುವುದು.	7,304	14,366	–

ಇ) 79 ಅಧಿಕಾರಿಗಳ ಮೇಲೆಇಲಾಖಾ ವಿಚಾರಣೆ ಯನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ.

ಈ) ಒಟ್ಟು 110.20 ಎಕರೆ ಜಮೀನು, ಕಂದಾಯ ದಾಖಲೆಗಳ ಆಧಾರ ಸರ್ಕಾರಿ ಜಮೀನೆಂದು ಗುರುತಿಸಿ ಸದರಿ ಜಮೀನನ್ನು ಸಾರ್ವಜನಿಕ ಹರಾಜು ಮೂಲಕ ವಿಲೇಪಡಿಸಲು ಕ್ರಮ ಜರುಗಿಸಲಾಗುತ್ತಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಮೀನಿನ ಒಟ್ಟು ಮೌಲ್ಯದ ಮಾಹಿತಿ ಲಭ್ಯವಾಗುವದು.

3522 (4561) ಶ್ರೀ ಆರ್.ಅಶೋಕ್ (ಉತ್ತರಹಳ್ಳಿ) – ಮಾನ್ಯ ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರದಲ್ಲಿ ಇತ್ತೀಚೆಗೆ ಡಕಾಯಿತ, ಹಗಲು ದರೋಡೆ, ಕೊಲೆಗಳು, ಸುಲಿಗೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರಿಂದ ಸಾರ್ವಜನಿಕರಲ್ಲಿ, ಆತಂಕ ಉಂಟಾಗಿ, ಪೋಲೀಸರ ಬಗ್ಗೆ ನಿರಾಸಕ್ತಿ ಉಂಟಾಗುತ್ತಿರುವುದು ನಿಜವೇ;

ಇ) ಈ ಮೇಲಿನ ಘಟನೆಗಳು ನಗರದಲ್ಲಿ ಕಳೆದ ಒಂದೂವರೆ ವರ್ಷಗಳಿಂದ ನಡೆದ ಪ್ರಕರಣಗಳೆಷ್ಟು; ವಿವರಗಳನ್ನುಒದಗಿಸುವುದು;

ಈ) ಸದರಿ ಪ್ರಕರಣಗಳಲ್ಲಿ ಭಾಗಿಯಾದವರುಗಳನ್ನು ಬಂಧಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚಲಾಗಿದೆ;

ಉ) ನಗರದಲ್ಲಿ ಡಕಾಯಿತಿ, ದರೋಡೆ ಮತ್ತು ಕೊಲೆಗಳು ನಡೆಯುವುದನ್ನು ತಡೆಯಲು ವಿಶೇಷ ಪಡೆಯನ್ನು ರಚಿಸಲಾಗಿದೆಯೇ; ನಗರದ ಯಾವ ಯಾವ ಭಾಗಗಳಲ್ಲಿ ಹೊಸ ಪೋಲಿಸ್ ಠಾಣೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ; ಹಾಗಿದ್ದಲ್ಲಿ, ಅವುಗಳನ್ನು ಪ್ರಾರಂಭಿಸಲಿರುವ ಸ್ಥಳಗಳಾವುವು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)–

ಕಳೆದ ಮೂರು ವರ್ಷಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಡಕಾಯಿತಿ	ಹಗಲು ಡಕಾಯಿತಿ	ಕೊಲೆ	ಸುಲಿಗೆ
2003	46	20	217	311
2004	37	16	214	455
2005 (30.6.05)	13	05	102	226

ಆ) ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ ಈ ಮೇಲ್ಕಂಡ ಪ್ರಕರಣಗಳು ಗಣನೀಯವಾಗಿ ಇಳಿಮುಖವಾಗಿದೆ.

ಇ) 01.01.2004 ರಿಂದ 30.06.2005 ರವರೆಗೆ ನಡೆದಪ್ರಕರಣಗಳ ಸಂಖ್ಯೆ: ಡಕಾಯಿತಿ – 50

ಹಗಲು ದರೋಡೆ – 21

ಕೊಲೆ – 316

ಸುಲಿಗೆ – 681

ಈ) ಪ್ರಕರಣಗಳಲ್ಲಿ ಭಾಗಿಯಾದ ಅಪರಾಧಿಗಳನ್ನು ಪತ್ತೆಹಚ್ಚಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

1. ಹಗಲು ರಾತ್ರಿ ಗಸ್ತು ವ್ಯವಸ್ಥೆಯನ್ನು ಠಾಣಾ ವ್ಯಾಪ್ತಿಗಳಲ್ಲಿ ಬಿಗಿಗೊಳಿಸಲಾಗಿದೆ.

2. ಚೇತಾ ಮತ್ತು ವಾಹನಗಳ ಗಸ್ತು ವ್ಯವಸ್ಥೆ ಹಗಲು ಮತ್ತು ರಾತ್ರಿ ಮಾಡಲಾಗುತ್ತಿದೆ.

3. ಅಪರಾಧಗಳನ್ನು ಎಸಗುವ ಎಂ.ಓ ಕ್ರಿಮಿನಲ್ಸ್ ಪತ್ತೆ ಹಚ್ಚಿ ಪ್ರಶ್ನಿಸಿ ಕ್ರಮ ಕೈಗೊಳ್ಳಲಾಗುತ್ತದೆ.

4. ನಾಕಾಬಂಧಿ ಕಾರ್ಯಕ್ರಮ ನಡೆಸುತ್ತಿದ್ದು, ಅಪರಾಧಿಗಳನ್ನು ಪತ್ತೆ ಹಚ್ಚಲಾಗುತ್ತಿದೆ.

5. ರೌಡಿ ಚಟುವಟಿಕೆಗಳ ಮೇಲೆ ನಿಗಾವಹಿಸಲಾಗಿರುತ್ತದೆ.

6. ಪೋಲಿಸ್ ಇನ್ಸ್‌ಪೆಕ್ಟರ್, ಎ.ಸಿ.ಪಿ. ಹಾಗೂ ಡಿ.ಸಿ.ಪಿ. ರವರುಗಳಿಂದ ಪ್ರತಿ ರಾತ್ರಿ ಸರದಿ ಮೇರೆಗೆ ರಾತ್ರಿ ಗಸ್ತು ನಡೆಯುತ್ತಿದೆ.

7. ವಿಭಾಗೀಯ ಮಟ್ಟದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿದ್ದು ಸದರಿ ತಂಡಗಳು ಸಂಬಂಧಪಟ್ಟ ವಿಭಾಗೀಯ ಡಿ.ಸಿ.ಪಿ. ರವರುಗಳ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

8. ಸಿ.ಸಿ.ಬಿ ವಿಭಾಗದಲ್ಲಿ 5 ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಸಹ ಡಿ.ಸಿ.ಪಿ. ಅಪರಾಧದ ನೆರ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ.

ಪತ್ತೆ ಮಾಡಲಾದ ಪ್ರಕರಣಗಳ ಸಂಖ್ಯೆ:

ಡಕಾಯಿತಿ	ಹಗಲು ದರೋಡೆ	ಕೊಲೆ	ಸುಲಿಗೆ
40	06	233	140

ಊ) ವಿಭಾಗೀಯ ಹಾಗೂ ಉಪ ವಿಭಾಗದ ಮಟ್ಟದಲ್ಲಿ ಕ್ರಿಮಿನಲ್ ಇಂಟಲಿಜೆನ್ಸ್ ಸ್ಕ್ವಾಡ್ ಎಂಬ ಪ್ರತ್ಯೇಕ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಈಗಾಗಲೇಕಾರ್ಯ ನಿರ್ವಹಿಸುತ್ತಿದ್ದು,ಅಪರಾಧಗಳನ್ನು ತಡೆಗಟ್ಟಲಾಗುತ್ತಿದೆ. ಈ ಕೆಳಗೆ ನಮೂದಿಸಿರುವ ಹೊಸ ಪೋಲಿಸ್ ಠಾಣೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಕ್ರ.ಸಂ. ಬೆಂಗಳೂರು ನಗರದಲ್ಲಿ ಪ್ರಾರಂಭಿಸಲಿರುವ ಹೊಸಪೋಲಿಸ್ ಠಾಣೆಗಳು,

1. ಶಾಂತಿನಗರ ಪೋಲಿಸ್ ಠಾಣೆ
2. ಥಣೀಸಂದ್ರ ಪೋಲಿಸ್ ಠಾಣೆ
3. ರಾಜರಾಜೇಶ್ವರಿ ನಗರ ಪೋಲಿಸ್ ಠಾಣೆ
4. ಅನ್ನಪೂರ್ಣೇಶ್ವರಿ ನಗರ ಪೋಲಿಸ್ ಠಾಣೆ
5. ಬ್ಯಾಡರ ಹಳ್ಳಿ ಪೋಲಿಸ್ ಠಾಣೆ
6. ಅರ್ಕಾವತಿ ಬಡಾವಣೆ ಪೋಲಿಸ್ ಠಾಣೆ
7. ನಾಗಸಂದ್ರ ಪೋಲಿಸ್ ಠಾಣೆ
8. ಹೊಸಕೆರೆಹಳ್ಳಿ ಪೋಲಿಸ್ ಠಾಣೆ
9. ಉತ್ತರಹಳ್ಳಿ ಪೋಲಿಸ್ ಠಾಣೆ
10. ಹೆಚ್ಎಸ್ಆರ್ ಲೇಔಟ್ ಪೋಲಿಸ್ ಠಾಣೆ
11. ಪರಪ್ಪನ ಅಗ್ರಹಾರ ಪೋಲಿಸ್ ಠಾಣೆ
12. ಹುಳಿಮಾವು ಪೋಲಿಸ್ ಠಾಣೆ
13. ಎಲೆಕ್ಟ್ರಾನಿಕ್ ಸಿಟಿ ಪೋಲಿಸ್ ಠಾಣೆ

14. ವರ್ತೂರು ಪೋಲಿಸ್ ಠಾಣೆ

15. ಕಾಡುಗೋಡಿ ಪೋಲಿಸ್ ಠಾಣೆ

16. ವೈಟ್‌ಫೀಲ್ಡ್ ಪೋಲಿಸ್ ಠಾಣೆ.

3523 (4562) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಲಾವಿದರಿಗೆ ಮಾಸಾಶನವನ್ನು ನೀಡುತ್ತಿರುವ ವಿಚಾರ ನಿಜವೇ; ಆ ಕಲಾವಿದರ ಸಂಖ್ಯೆ ಎಷ್ಟು; ನೀಡುವ ಮಾಸಾಶನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ;

ಆ) ಈ ಮಾಸಾಶನವನ್ನು ಹೆಚ್ಚಿಸಿರುವುದು ನಿಜವೇ; ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು;

ಇ) ಕಳೆದ 3 ವರ್ಷಗಳಿಂದ ಈ ಕಲಾವಿದರುಗಳಿಗೆ ಮಾಸಾಶನ ನೀಡದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿ ಎಷ್ಟು ಕಲಾವಿದರಿಗೆ ಮಾಸಾಶನ ಬಾಕಿ ನೀಡಬೇಕಾಗಿದೆ;

ಈ) ಇದುವರೆಗೂ ಮಾಸಾಶನ ನೀಡದಿರಲು ಕಾರಣಗಳೇನು; ಯಾವಾಗ ನೀಡಲಾಗುವುದು ;

ಉ) ಉಳಿದ ಕಲಾವಿದರು ಸಲ್ಲಿಸಿರುವ ಅರ್ಜಿಗಳಿಗೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಹೌದು.

ಆ) ಇದುವರೆಗೆ 11,415 ಮಂದಿ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗಿದೆ.

ಇ) ಮಾಹೆಯಾನ 500.00ರೂ.ಗಳನ್ನು ನೀಡಲಾಗುತ್ತಿದೆ.

ಈ) ಅನುಬಂಧ ಲಗತ್ತಿಸಿದೆ.

ಉ) ದಿನಾಂಕ; 01.11.2002 ರಿಂದ 250.00 ರೂ.ಗಳ ಮಾಸಾಶನವನ್ನು 500.00 ರೂ.ಗಳಿಗೆ ಏರಿಸಲಾಗಿದೆ.

ಇ) ಅ) ಹೌದು ಆ) ತಜ್ಞರ ಸಮಿತಿಯಿಂದ ಶಿಫಾರಸ್ಸಾಗಿರುವ 1645 ಜನ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಬೇಕಾಗಿದೆ.